ಮೈಸೂರ ಗೆಜೆಟ.

ಸಂ. XXXVIII.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 29, ಸನ್ 1903.

ವಿಷಯ ಸೂಚಿಕೆ.

1ನೆ ಭಾಗ–ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ಟು, ರೆಜಿಸ್ಟ್ರೇರ್ಷ ವ ಯಡ್ಮಿನಿಸ್ಟ್ರೇರ್ಷ ಇನ್‌ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಿಷ್ಟತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟಿಸ್‌ಗಳು.

3ನೆ ಭಾಗ–ಲೆಜಿಸ್‌ಲೇಟಿವ್ ರೆಗ್ಯುಲೇಷಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ–ಸರ್ಕಾರೀ ಕಾಗದಪತ್ರಗಳು—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೆ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರ ಸರ್ಕಾರದಿಂದ ಕೊಡೋಣಾದ

ಇಸ್ತಿಹಾರ್‌ನಾಮೆ.

ಮುಜರಾಯಿ.

ನಂ. 878, ತಾರೀಖು 28ನೆ ಅಕ್ಟೋಬರ್ 1903, ಬೆಂಗಳೂರು.

1903ನೆ ಇಸವಿ ಅಕ್ಟೋಬರ್ ತಾರೀಖು 3ರಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರು ಬಿರುದುಗಳನ್ನು ದಯಪಾಲಿಸಿ ಅಪ್ಪಣೆ ಕೊಟ್ಟ ಇದರ ಕೆಳಗೆ ಬರುವ ಪ್ರಸಿದ್ಧ ಪತ್ರಿಕೆಯನ್ನು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟ ಪಡಿಸಿರುತ್ತೆ.

ಹುಕುಂ ಬವೋಜೀಬ್,

L. ANANTASAMI RAO,

ಡೆಪ್ಯುಟಿ ಸೆಕ್ರಟೆರಿ, ಮೈಸೂರು ಗವರ್ಮೆಂಟ್ ಮುಜರಾಯಿ ಇಲಾಖಾ.

ಪ್ರಸಿದ್ಧ ಪತ್ರಿಕೆ.

ಶ್ರೀ

ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಳ ದೇಶಾವತಂಸ ಕರ್ಣಾಟಕ ಜನಪದ ಸಂಪದ ದಿಷ್ಟಾನುಭೂತ ಶ್ರೀಮನ್ಮಹೀಶೂರ ಮಹಾ ಸಂಸ್ಥಾನದ ಮಧ್ಯೆ ದೇದೀಪ್ಯಮಾನ ನಿಖಿಳ ಕಳಾನಿಧಿ ಕೂರ್ಮ ಮಾಗತ ರಾಜಪ್ರತಿಪಾಲ ಪ್ರಮುಖ ನಿಖಿಳ ನಿಜ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂ

ದಿವ್ಯ ರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಳಾನಿಧಿ ಶಂಖಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧಗಣೇವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಕರ್ಣಾಟಕ ಸಿಂಹಾಸನಾಧೀಶ್ವರ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರು.

ಶಾಲೀವಾಹನ ಶಕ 1826ನೆ ಶೋಭಕೃನ್ನಾಮ ಸಂವತ್ಸರದ ಆಶ್ವೀಜ ಶುದ್ಧ ದ್ವಾದಶಿ ಶನಿವಾರದಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ಈ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರರಾದ ಅರಮನೆ ಧರ್ಮಾಧಿಕಾರಿಗಳಾದ ಕುಂಭಕೋಣದ ಕೌಲಿಗಿ ಶೇಷಾಚಾರ್ಯರಿಗೂ, ಅರಮನೆ ಧರ್ಮಾಧಿಕಾರಿಗಳಾದ ಸುಂದರಶಾಸ್ತ್ರಿಗೂ, ಮೇಲ್ಕೋಟೆ ಸಂಸ್ಕೃತ ಪಾಠಶಾಲಾಧ್ಯಕ್ಷರಾದ ಸ್ಥಾನೀಕಂ ಕುಪ್ಪಣಯ್ಯಂಗಾರ್ಯರಿಗೂ ಸಹ "ಪಂಡಿತ ರತ್ನಂ" ಎಂಬ ಬಿರುದನ್ನು, ಮೌಲ್ವಿ ಸೈಯದ್ ಷಹಬುದ್ದೀನ್‌ಸಾಹೇಬ್ ಖಾದ್ರಿಯವರಿಗೆ "ಶಿರಾಜುಲ್ ಉಲ್ಮಾ" ಎಂಬ ಬಿರುದನ್ನು, ತಕ್ಕ ಮರ್ಯಾದಗಳೊಡನೆ ದಯಪಾಲಿಸಿರುತ್ತೇವೆ.

Sd. KRISHNA RAJA WADIYAR.

ತಾರೀಖು 14ನೆ ಅಕ್ಟೋಬರ್ 1903.

ನಂ. ಲೋ. ಜೋ. ಪಿ. 423, ಮದರಾಸು ಗವರ್ನ್‌ಮೆಂಟಿನವರಿಂದ ಕೊಡೋಣಾದ ಇರಡೀ ಕಂಡ ಇಸ್ತಿಹಾರ್ನಾಮೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಮರಳೀ ಘಾಯಿಷ್ಮಾಡಲ್ಪಟ್ಟಿರುತ್ತೆ.

ನೀಲಗಿರಿ ಜಿಲ್ಲಾ ಉಟಕಮಂಡ್‌ನಲ್ಲಿ ಪ್ಲೇಗ್ ರೋಗವು ಇರುವದ್ದರಿಂದಲೂ ಮತ್ತು ಅದು ಹರಡದಂತೆ ಮಾಡುವದು ಯುಕ್ತವೆಂತ ತೋರುವದ್ದರಿಂದಲೂ ರಂಜಾನ್ ತಿಂಗಳ ಅಂತ್ಯ ಭಾಗವೂ ನಂತರ ಬರುವ ಷವ್ವಾಲ್ ತಿಂಗಳ ಮೊದಲುವಾರವೂ ಸೇರಿ ಆಗುವ 1903ನೆ ಇಸವಿ ಡಿಸೆಂಬರು 5ನೆ ತಾರೀಖಿನಿಂದ ಅದೇ ಮಾಹೆಯ 27ನೆ ತಾರೀಖಿನ ವರೆಗೂ ಉಭಯ ದಿನಗಳೂ ಸೇರಿ, ಭಿಕ್ಷುಗಾರರು ಮತ್ತು ದೇಶಗೇಡಿಗಳು ಉಟಕಮಂಡ್‌ಗೆ ಪ್ರಯಾಣ ಮಾಡಕೂಡದೆಂತಲೂ ಅಧನ್ನು ಪ್ರವೇಶ ಮಾಡಕೂಡದೆಂತಲೂ ಅಲ್ಲಿ ನಿಲ್ಲಕೂಡದೆಂತಲೂ ಮುಂತಾಲೋಚಿಕ ಸಮಾಜ ಸಹಿತರಾದ ಗವರ್ನರವರು ಸ್ಟ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ ಕಾನೂನನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ನಿರೋಧಿಸುತ್ತಾರೆ. ಮತ್ತು ಉಟಕಮಂಡ್‌ಗೆ ಪ್ರಯಾಣ ಮಾಡುವ ಯಾ ಪ್ರಯಾಣ ಮಾಡುವದಾಗಿ ನಂಬಲು ಕಾರಣವುಳ್ಳ ಯಾವ ಭಿಕ್ಷುಗಾರ ಅಥವಾ ದೇಶಗೇಡಿಯಾಗಲಿ, ನೀಲಗಿರಿ—ಮಲಬಾರ್ ಮತ್ತು ಕೊಯಿಮತ್ತೂರು ಜಿಲ್ಲಾ ಕಲೆಕ್ಟರುಗಳು ತಮಗೆ ಸೂಕ್ತವಾದಂತೆ ಏರ್ಪಾಡು ಮಾಡಿದ ಸ್ಥಳಗಳಲ್ಲಿ ನಿಲ್ಲಬೇಕೆಂತಲೂ ಮತ್ತು ಸದರಿ ಕಲೆಕ್ಟರುಗಳಿಂದ ಇದಕ್ಕಾಗಿ ನೇಮಿಸಲ್ಪಟ್ಟ ಆಫಿಸರುಗಳ ಆಜ್ಞೆಯಂತೆ ನಡೆಯಬಕ್ಕದ್ದೆಂತಲೂ ತಾತ್ಕಾಲಿಕ್ಕೆ ವಿಧಾಯಿಸಿರುತ್ತಾರೆ.

ತಾರೀಖು 17ನೆ ಅಕ್ಟೋಬರ್ 1903.

ನಂ. ಲೋ. ಜೋ. ಪಿ 435, ಇಂಡಿಯಾ ಗವರ್ನ್‌ಮೆಂಟಿನಿಂದ ಸ್ಟ 1903ನೆ ಇಸವಿ ಸೆಪ್ಟಂಬರು 30ನೆ ತಾರೀಖಿನಲ್ಲಿ ಕೊಡೋಣಾದ 1485ನೆ ನಂಬರು ಇಸ್ತಿಹಾರ್ನಾಮೆಯನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪುನಃ ಘಾಯಿಷ್ಮಾಡಲ್ಪಟ್ಟಿರುತ್ತೆ.

ಸ್ಟ 1902ನೆ ಇಸವಿ ಅಕ್ಟೋಬರು 25ನೆ ಮುಕ್ತಂ ಹೋಂ ಡಿಪಾರ್ಟ್‌ಮೆಂಟಿನ 2278ನೆ ನಂಬರು ಇಸ್ತಿಹಾರ್ನಾಮೆಯಲ್ಲಿ ಸ್ಟ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ III‌ನೆ ನಂಬರು ಕಾನೂನಿನ 2ನೆ ಪ್ರಕರಣಕ್ಕೆ ಸೇರಿದ 1ನೆ ಅಧೀನಪ್ರಕರಣವನ್ನನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ಮುಂತಾಲೋಚಿಕ ಸಮಾಜ ಸಹಿತರಾದ ಗವರ್ನರ್ ಜನರಲ್ ಸಾಹೇಬ್ ಬಹದ್ದೂರ್‌ರವರು ಸ್ಟ 1903ನೆ ಇಸವಿಯಲ್ಲಿ ಹಡ್ಜಾಜ್ ಯಾತ್ರೆಗೆ ಹೊರಡತಕ್ಕ ಕಾಲದಲ್ಲಿ ಬೊಂಬಾಯಿ ಆಧಿಪತ್ಯದಲ್ಲಿರುವ ರೇವುಗಳಾದ ಬೊಂಬಾಯಿ ಮತ್ತು ಕರಾಚಿ ಇವುಗಳಿಂದಲೂ ಬಂಗಾಳ ಆಧಿಪತ್ಯದಲ್ಲಿರುವ ಚಿಟಗಾಂಗ್‌ನಿಂದಲೂ ಸದರಿ ಯಾತ್ರೆಗೆ ಹೋಗಲು ಇಂಡಿಯಾ ದೇಶದ ಯಾವ ನಿವಾಸಿಗಾದರೂ ಕೆಲವು ಎಚ್ಚರಿಕೆಗಳಿಗೆ ವಳಪಟ್ಟು ಅಪ್ಪಣೆ ಕೊಡಬಹುದೆಂದು ಹುಕುಂ ಮಾಡಿದರು.

2. ಸ್ಟ 1902ನೆ ಇಸವಿಯ ಮತ್ತು ಇದರ ಹಿಂದಿನ ಸಾಲುಗಳ ಯಾತ್ರಾ ಕಾಲದಲ್ಲಿ ಜಾರಿ ಮಾಡಿದ ಎಚ್ಚರಿಕೆಗಳ ಪೈಕಿ ಪ್ರಯಾಣಾಪೇಕ್ಷೆಯುಳ್ಳ ಯಾತ್ರಿಕರೆಲ್ಲರನ್ನೂ ಅವರವರ ಊರುಗಳಿಗೆ ಸಮೀಪದಲ್ಲಿ ಆಯಾ ನಾಡಿನ ಅಜವಾಯಿಷಿ ಪಾಳಯದಲ್ಲಿ ಸೇರಿಸಿ 10 ದಿನಗಳ ಮಟ್ಟಿಗಾದರೂ ನಿಲ್ಲಿಸಿ ಅವರು ಹಡಗನ್ನೇರುವ ರೇವು ಪಟ್ಟಣಗಳಲ್ಲಿಯಾಗಲಿ ಅವುಗಳ ಸಮೀಪದಲ್ಲಿರುವ ಮುಖ್ಯವಾದ ಪಾಳಯಕ್ಕೆ ಪ್ರತ್ಯೇಕವಾದ ರೈಲ್ವೆ ಟ್ರೇಗಳಲ್ಲಿಯಾಗಲಿ ಅಥವಾ ಬಂಡಿಗಳಲ್ಲಿಯಾಗಲಿ ರವಾನಿಸುವದಕ್ಕೆ ಮುಂಚೆ ಅವರವರ ಬಟ್ಟೆ ಬರೆಗಳನ್ನು ಸೋಂಕು ಹೋಗುವಂತೆ (ಡಿಸಿಫೆಕ್ಟ್) ಮಾಡುವುದು ಬಂದು ಅಂಶವಾಗಿತ್ತು. ಇಂಡಿಯಾ ಗವರ್ನ್‌ಮೆಂಟಿನವರಿಗೆ ಅಸಮ್ಮತವಾದ ಖಡದಾದ ಏರ್ಪಾಡುಗಳನ್ನು ಜಾರಿ ಮಾಡದೆ ನಾಡಿನ ಪಾಳಯದಲ್ಲಿ ಯಾತ್ರಿಕರನ್ನು ನೋಡಲು ತಡೆಯುವುದು ಸಾಧ್ಯವೇ ಅಲ್ಲವೆಂತಲೂ ಬಂದುವೇಳೆ ಸಾಧ್ಯವಾದರೂ ಒಹಳ ಕಷ್ಟವೆಂತಲೂ ಅನುಭವ ಸಿದ್ಧವಾಗಿರುವುದು. ಆದ್ದರಿಂದ ಘನವನ್ನು ಹೊಂದಿದ ಚಕ್ರವರ್ತಿಯವರ ಗವರ್ನ್‌ಮೆಂಟಿನ ಸಮ್ಮತಿಯಿಂದ ಬರುವ ಯಾತ್ರಾ ಕಾಲದಲ್ಲಿ ಯಾತ್ರಿಕರನ್ನು ನಿಲ್ಲಿಸುವುದಕ್ಕೆ ನಾಡಿನ ಪಾಳಯಗಳನ್ನು ಏರ್ಪಡಿಸಕೂಡದೆಂತಲೂ ಮತ್ತು ಯಾತ್ರಿಕರು ಹಡಗನ್ನೇರುವ ರೇವುಗಳಲ್ಲಿ ಏರ್ಪಾಡು ಮಾಡಿದ ದೊಡ್ಡ ಪಾಳಯಗಳಿಗೆ ನೇರಾ ಹೋಗಬಹುದೆಂತಲೂ ತೀರ್ಮಾನಿಸಿರುತ್ತಾರೆ. ಅದರಂತೆ ಕೆಳಗೆ ನಮೂದಿಸಿರುವ ಕಾನೂನುಗಳಿಗೆ ಬಳಪಟ್ಟು ಇಂಡಿಯಾ ದೇಶದ ಯಾವ ನಿವಾಸಿಯಾಗಲಿ ಬರುವ ಯಾತ್ರಾ ಕಾಲದಲ್ಲಿ ಹಾಜ್‌ಗೆ ಹೋಗಬಹುದು.

3. ಸ್ಸ 1902ನೆ ಇಸವಿ ಅಕ್ಟೋಬರು 25ನೆ ಮರ್ಕುಮಿನ ಹೋಂ ಡಿಪಾರ್ಟ್‌ಮೆಂಟಿನ 2278ನೆ ನಂಬರು ಇಸ್ತಿಹಾರ್ನ ಮೆಯಲ್ಲಿನ ಹುಕುಂಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತವೆ.

4. ಮುಂತಾಲೋಚನೆಯು ಸಮಾಜ ಸಹಿತರಾದ ಗವರ್ನರ್ ಜನರಲ್ ಸಾಹೇಬ್ ಬಹದ್ದೂರ್‌ರವರು.

(i) ಬೊಂಬಾಯಿ ಆಧಿಪತ್ಯದಲ್ಲಿನ ಬೊಂಬಾಯಿ ರೇವು ಬಂಗಾಳ ಆಧಿಪತ್ಯದಲ್ಲಿನ ಚಿಟಿಗಾಂಗ್ ರೇವು ಇವುಗಳು ವಿನಾ ಯಾವ ರೇವಿನಿಂದಲೂ ಮೆಕ್ಕಾ ಯಾತ್ರೆಗೆ ಹೋಗುವ ಉದ್ದೇಶದಿಂದ ಯಾವ ಮನುಷ್ಯನಿಗಾಗಲಿ ಹಡಗೇರುವುದಕ್ಕೆ ಅಪ್ಪಣೆ ಕೊಡತಕ್ಕದ್ದಲ್ಲವೆಂತಲೂ—

(ii) ಹಡಗನ್ನೇರುವ ರೇವಿನ ಅಥವಾ ಆದರ ಸಮೀಪದಲ್ಲಿ ಏರ್ಪಾಟು ಮಾಡಲ್ಪಟ್ಟ ಸ್ಥಳದಲ್ಲಿ ಆ ಸ್ಥಳದ ಛಾರ್ಜ್‌ನಲ್ಲಿರುವ ಮೆಡಿಕಲ್ ಆಫೀಸರಿಗೆ ಯಾತ್ರೆಯು ಉದ್ದೇಶದಿಂದ ಪ್ರಯಾಣ ಮಾಡುವ ಮನುಷ್ಯನು ಪ್ಲೇಗ್ ರೋಗದ ಸೋಂಕನ್ನು ತನ್ನ ಸಂಗಡ ತೆಗದುಕೊಂಡು ಹೋಗುವ ಅಪಾಯವು ನಿಶ್ಚೈಪವಾಗಿ ಹೋಯಿತೆಂದು ದೃಢವಾಗಿ ತೋರುವ ವರಗೂ ಅಂತಹ ಸ್ಥಳದಲ್ಲಿ ಅಜಮಾಯಿಷಿಯಲ್ಲಿಡಲ್ಪಟ್ಟಿದ್ದೆ ಹೊರತು ಯಾವ ಮನುಷ್ಯನು ಅಂತಹ ರೇವಿನಿಂದ ಅಂತಹ ಉದ್ದೇಶದೊಡವೆ ಹಡಗನ್ನೇರುವದಕ್ಕೆ ಅಪ್ಪಣೆ ಕೊಡತಕ್ಕದ್ದಲ್ಲವೆಂತಲೂ—

(iii) ಯಾತ್ರಿಕರನ್ನು ಅಜಮಾಯಿಷಿಯಲ್ಲಿ ನಿಲ್ಲಿಸುವದಕ್ಕೆ ಏರ್ಪಡಿಸಿರುವ ಸ್ಥಳಗಳು ವಿನಾ ಬೇರೆ ಸ್ಥಳಗಳಲ್ಲಿ ಸದರಿ ಯಾತ್ರಿಕರಿಗೆ ಪ್ರಯಾಣದ ಟಿಕೆಟ್ಟುಗಳನ್ನು ಮಾರತಕ್ಕದ್ದಲ್ಲವೆಂತಲೂ—ಅಜ್ಞಾಪಿಸಿರುತ್ತಾರೆ.

5. ಮೇಲ್ಕಂಡ ಎಚ್ಚರಿಕೆಗಳಿಗೆ ಒಳಪಟ್ಟು ಹೆಡ್‌ಜಾಜ್‌ಗೆ ಯಾತ್ರೆ ಹೊರಡುವುದಕ್ಕೆ ಅಪ್ಪಣೆ ಕೊಡಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರು ತೀರ್ಮಾನಿಸಿದ್ದಾರ್ಯೂ ಮುಖ್ಯವಾಗಿ ತುರ್ಕಿ ಗವರ್ನ್‌ಮೆಂಟಿನಿಂದ ವಿಧಿಸಲ್ಪಟ್ಟಿರುವ ಖಂಡಿತವಾದ ಕ್ವಾರಂಟೈನ್ ನಿಬಂಧನೆಗಳನ್ನು ಮತ್ತು ಅರಬ್ಬೀದೇಶಕ್ಕೆ ಸೇರಿದ ಕೂಡ್ಲೆ ಯಾತ್ರಿಕರಿಗೆ ಉಂಟಾಗುವ ಅನಾನುಕೂಲ್ಯವನ್ನು ಕಷ್ಟವನ್ನೂ ಆಲೋಚಿಸಿ ಮುಂದಿನ ಯಾತ್ರಾಕಾಲದವರೆಗೂ ಅವರ ಉದ್ದೇಶಗಳನ್ನು ನೆರವೇರಿಸುವುದನ್ನು ತಳ್ಳಬೇಕೆಂದು ಯಾತ್ರಿಕರಿಗೆ ಚನ್ನಾಗಿ ಬುದ್ಧಿ ಹೇಳಬೇಕೆಂದು ಗತ ವರ್ಷದಲ್ಲಿ ಕೊಟ್ಟ ಎಚ್ಚರಿಕೆಯನ್ನು ಪುನಃ ಕೊಡುವುದು ಇಂಡಿಯಾ ಗವರ್ನ್‌ಮೆಂಟಿನವರಿಗೆ ಅವಶ್ಯವಾಗಿ ತೋರುತ್ತದೆ.

ತಾರೀಖು 20ನೆ ಅಕ್ಟೋಬರ್ 1903.

ನಂ. ಲೋ. ಬೋ. ಪಿ. 439, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧ ಪಡಿಸುವದೇನಂದರೆ—ಸಾಂಕ್ರಾಮಿಕ ರೋಗಗಳ ಕಾನೂನನ್ನು ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9393—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರು ಇಸ್ತಿಹಾರ್ನ ಮೆಗಳೊಡನೆ ಕೊಡಲ್ಪಟ್ಟ ಕಾನೂನುಗಳ ಉದ್ದೇಶಗಳಿಗಾಗಿ ಹಾಸನದ ಡಿಸ್ಟ್ರಿಕ್ಟಿನ ಲ್ಲಿರುವ ಇದರಡೀ ಕಂಡ ಸ್ಥಳಗಳು "ರೋಗ ತಗಲಿದ ಪ್ರದೇಶಗಳಾಗಿ" ಎಣಿಸಲ್ಪಡತಕ್ಕದ್ದು :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1.	ದೊಡ್ಡ ಆಲದಹಳ್ಳಿ	ಹಾಸನ	17.	ಬೇಲೂರು	ಬೇಲೂರು
2.	ಅಮ್ಮನಗುಡಿ ಕೊಪ್ಪಲ್	ಡಿಟೋ	18.	ಮುದುಗೆರೆ	ಡಿಟೋ
3.	ಹಲಿವಾಗಲ್	ಡಿಟೋ	19.	ಅಗ್ರಹಾರ	ಚನ್ನರಾಯಪಟ್ಟಣ
4.	ಕಡಯ	ಡಿಟೋ	20.	ಜಕ್ಕೇನಹಳ್ಳಿ	ಡಿಟೋ
5.	ಬಾಕೇನಹಳ್ಳಿ	ಡಿಟೋ	21.	ಜಡಿಗಾನಹಳ್ಳಿ	ಡಿಟೋ
6.	ಸಿದ್ದಾಪುರ	ಡಿಟೋ	22.	ಬಾಗೂರು	ಡಿಟೋ
7.	ಗೋವಿಂದಪುರ	ಡಿಟೋ	23.	ಮೂದನಹಳ್ಳಿ	ಡಿಟೋ
8.	ಅಮ್ಮಿಗನಹಳ್ಳಿ	ಡಿಟೋ	24.	ಆಡಿಹಳ್ಳಿ	ಡಿಟೋ
9.	ಸಾಮಪುರ	ಡಿಟೋ	25.	ಓಬಲಾಪುರ	ಡಿಟೋ
10.	ಚಿಕ್ಕ ಬ್ಯಾಡಗೆರೆ	ಬೇಲೂರು	26.	ಚಾನೇನಹಳ್ಳಿ	ಡಿಟೋ
11.	ಹಿರಿಹಸದೆ	ಡಿಟೋ	27.	ಮುಗಳಿಕೊಪ್ಪಲ್	ಆಲೂರು (ಸಬ್ ತಾ||)
12.	ಕನಾಯಿಕನಹಳ್ಳಿ	ಡಿಟೋ	28.	ಆನೆಹಳ್ಳದ ಕೊಪ್ಪಲ್	ಡಿಟೋ
13.	ಕಂದಾವರ	ಡಿಟೋ	29.	ಕಟ್ಟೆಗೋಡು	ಡಿಟೋ
14.	ಧನಾಯಿಕನಹಳ್ಳಿ	ಡಿಟೋ	30.	ಚಿಗಲೂರು	ಡಿಟೋ
15.	ಅಂದೆಲೆ	ಬೇಲೂರು	31.	ಕಾಮಸಂದ್ರ	ಅರಸೀಕೆರೆ
16.	ಕರಗದ	ಡಿಟೋ			

ತಾರೀಖು 20ನೆ ಅಕ್ಟೋಬರು 1903.

ನಂ. 441—ಲೋ. ಬೋ. ಪಿ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, 1903ನೆ ಜುಲೈ 8ನೆ ಮರ್ಕುಂ ಲೋ. ಬೋ. ಪಿ. 29ನೆ ನಂಬರ್ ಇಸ್ತಿಹಾರ್ನ ಮೆಯಲ್ಲಿ ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ಎರಡು ತಿಂಗಳುಗಳಿಗಿಂತ ಜಾಸ್ತಿಯಾಗಿ ಪ್ಲೇಗ್ ರೋಗವು ಇಲ್ಲದೆ ಇರುವದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1.	ಸಂತೇನಹಳ್ಳಿ	ಹಾಸನ	3.	ರಂಗಾಪುರ	ಅರಸೀಕೆರೆ
2.	ಚನ್ನಪಟ್ಟಣ	ಡಿಟೋ	4.	ಹುಲ್ಲಕಲ್	ಅರಕಲಗೂಡು

ನಂ. ಲೋ. ಬೋ. ಪಿ. 461, ತಾರೀಖು 26ನೆ ಆಕ್ಟೋಬರ್ 1903.

ಚಿತ್ರದುರ್ಗ ಟವನಿನ ಸುಮಾರು 2 ಮೈಲಿ ಫಾಸಲೆಯಲ್ಲಿರುವ ಮುರಗಿ ಮಠದ ಮೃತಪಟ್ಟ ಸ್ವಾಮಿಗಳಿಗೆ ಬದಲಾಗಿ ಮತ್ತೊಬ್ಬರನ್ನು 1903ನೆ ನವಂಬರ್ 2ನೆ ತಾರೀಖಿನಲ್ಲಿ ಜರುಗಾಯಿಸುವ ಸಂದರ್ಭದಲ್ಲಿ ಬೊಂಬಾಯಿ ಪ್ರೆಸಿಡೆನ್ಸಿಯಲ್ಲಿಯೂ, ಮದರಾಸು ಪ್ರೆಸಿಡೆನ್ಸಿಯಲ್ಲಿಯೂ, ನೈಜಾಂರವರ ಸಂಸ್ಥಾನದಲ್ಲಿಯೂ, ಮೈಸೂರ ಸಂಸ್ಥಾನದಲ್ಲಿಯು ಇರುವ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದಲೂ ಮತ್ತು ರೋಗ ತಗಲಿದ ಇತರ ಪ್ರದೇಶಗಳಿಂದಲೂ ಜನಗಳು ಚಿತ್ರದುರ್ಗ ಟವನ್ನಲ್ಲಿಯೂ ಮತ್ತು ಅದರ ಸಮೀಪದಲ್ಲಿಯೂ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ ರೆಗುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜ ಸರ್ಕಾರದವರು ಮೇಲ್ಕಂಡ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಚಿತ್ರದುರ್ಗಕ್ಕೆ 1903ನೆ ಆಕ್ಟೋಬರ್ 30ರ ಲಾಗಾಯಿತು ನವಂಬರ್ 5ರ ವರಿವಿಗೆ ಬರುವದನ್ನು ಅಡ್ಡೀ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಚಿತ್ರದುರ್ಗ ಟವನಿನಲ್ಲಿಕ್ಕೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 27ನೆ ಆಕ್ಟೋಬರ್ 1903.

ನಂ. ಲೋ. ಬೋ. ಪಿ. 485, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನ್‌ಮೆಂಟಿನವರು ಅಡ್ಡೀ ಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಆಧಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ಕಲಗುಂದದ ದನಗಳ ಪರಸೆ	ಕಲಗುಂದ	ಉಪ್ಪಿನಂಗಡಿ	ದಕ್ಷಿಣಕನ್ನಡ	1ನೆ ನವಂಬರ್ 1903	19ನೆ ನವಂಬರ್ 1903	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಡಾರ್ಸ್‌ಮೆಂಟ್ ನಂ. 1120—ಪಿ., ತಾ॥ 23—10—1903.
ಸುಬ್ರಹ್ಮಣ್ಯ ಷಷ್ಟಿ ಉತ್ಸವ	ಸುಬ್ರಹ್ಮಣ್ಯ	ಡಿಟೋ	ಡಿಟೋ	2ನೆ ಡಿಟೋ	26ನೆ ಡಿಟೋ	ಡಿಟೋ ನಂ. 1122 ಪಿ., ತಾ॥ 23—10—1903.
ದೀಪೋತ್ಸವ	ಧರ್ಮಸ್ಥಳ	ಡಿಟೋ	ಡಿಟೋ	8ನೆ ಡಿಟೋ	18ನೆ ಡಿಟೋ	ಡಿಟೋ ನಂ. 1124 ಪಿ., ತಾ॥ 23—10—1903.
ಏಕಾದಸೀ ಉತ್ಸವ ಮತ್ತು ಪರಸೆ	ಗುರುವಯೂರು	ಪೊನ್ನನಿ	ಮಲಬಾರ್	10ನೆ ಡಿಟೋ	31ನೆ ಡಿಸೆಂಬರ್ 03.	ಡಿಟೋ ನಂ. 1145 ಪಿ., ತಾ॥ 26—10—1903.

ತಾರೀಖು 18ನೆ ಸೆಪ್ಟಂಬರ್ 1903.

ನಂ. 658—ಜು., ಮೈಸೂರು ಸೀಮೆಯ ರೆಸಿಡೆಂಟರವರ ಫಸ್ಟ್ ಅಸಿಸ್ಟೆಂಟರವರಿಂದ ಕೊಡಲ್ಪಟ್ಟ 1903ನೆ ಸೆಪ್ಟಂಬರ್ 10ನೆ ಮಕ್ಕು ಮಿನ ಇದರಡೀ ಕಂಡ ನೋಟಿಸು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪುನಹ ಘಾಯಿಷ್ಮಾಡಲ್ಪಟ್ಟಿರುತ್ತದೆ:—

"ಸ್ರ 1878ನೆ ಇಸವಿಯ ಇಂಡಿಯನ್ ಆರ್ಮ್ಸ್ ಆಕ್ಟನುಸರಿಸಿ ಕೊಡಲ್ಪಟ್ಟ ರೂಲುಗಳಿಗನುಸಾರವಾಗಿ ಬ್ರಿಟಿಷ್ ಇಂಡಿಯಾ ದೇಶದಿಂದ ಬೆಂಗಳೂರ ಸಿವಿಲ್ ವ ಮಿಲಿಟರಿ ಸ್ಟೇಷನ್ ಸಹಿತವಾಗಿ ಮೈಸೂರ ಸಂಸ್ಥಾನಕ್ಕೆ ಆಯುಧಗಳನ್ನೂ ಮತ್ತು ಮದ್ದು ವಗೈರೆಗಳನ್ನೂ ಆಮದು ಮಾಡಲಿಕ್ಕೆ ಲೈಸೆನ್ಸುಗಳಿಗೋಸ್ಕರ ಅರ್ಜಿಗಳು ಮತ್ತು ಈ ರೂಲುಗಳಿಗೆ ಸಂಬಂಧಪಟ್ಟ ದರೋಬಸ್ತು ಕಾಗದ ಪತ್ರಗಳು ಬೆಂಗಳೂರಲ್ಲಿರುವ ಮೈಸೂರು ಸೀಮೆಯ ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರಿಗೆ ಬರೆದುಕೊಳ್ಳಬೇಕೇ ಹೊರ್ತು, ಮೈಸೂರು ಸೀಮೆಯ ರೆಸಿಡೆಂಟರವರಿಗೆ ಬರೆದುಕೊಳ್ಳಕೂಡದು."

ತಾರೀಖು 22ನೆ ಆಕ್ಟೋಬರ್ 1903.

ನಂ. ಜ. 1891, ಮೆ॥ ಎಸ್. ಜೆ. ಆಶೀರ್ವಾದಂ, ಎಂ. ಬಿ., ಸಿ. ಯಂ., ಯವರು 1903ನೆ ಸೆಪ್ಟಂಬರ್ 23ನೆ ತಾರೀಖಿನಾರಭ್ಯ ಸಬ್ ಅಸಿಸ್ಟೆಂಟ್ ಸರ್ಜ್ಜನರುಗಳ 3ನೆ ಕ್ಲಾಸಿನಿಂದ 2ನೆ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 23ನೆ ಅಕ್ಟೋಬರ್ 1903.

ನಂ. 813 —ಜ್ಯು. 1–02–03, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ತುಮಕೂರು ಡಿಸ್ಟ್ರಿಕ್ಟಿನ ಪ್ರೊಬೇಷನರಿ ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರಾದ ಮೆ|| ಎ. ಸಿ. ಬಸವರಾಜೆ ಅರಸುನವರಿಗೆ 1903ನೆ ಆಗಸ್ಟು 2ನೆ ತಾರೀಖಿನ ಲಾಗಾಯತು 7ನೆ ತಾರೀಖಿನವರಿಗೆ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 24ನೆ ಅಕ್ಟೋಬರ್ 1903.

ನಂ. 827—ಜು., ಕ್ರಿಮಿನಲ್ ಪ್ರೊಸೀಜರ್ ಕೋಡಿನ 37ನೆ ಸೆಕ್ಷನ್ ಅನುಸರಿಸಿ ಚೆನ್ನಪಟ್ಟಣ ತಾಲ್ಲೂಕಿನ ಅಮಲ್ದಾರ್ ವರ್ಗದ ಎರಡನೆ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ|| ಎಚ್. ಸೀತಾರಾಮಯ್ಯನವರಿಗೆ ಸದರೀ ಕ್ಲಾಸಿನ ಮ್ಯಾಜಿಸ್ಟ್ರೇಟರವರಿಗೆ ಗವರ್ನ್‌ಮೆಂಟಿನವರು ಕೊಡಬಹುದಾದ ನಾಲ್ಕನೇ ಷೆಡ್ಯೂಲಿನಲ್ಲಿ ಜಾಸ್ತಿ ಅಧಿಕಾರವಾಗಿ ವಿವರಿಸಲ್ಪಟ್ಟ ಇದರಡೀ ಕಂಡ ಅಧಿಕಾರವು ಕೊಡಲ್ಪಟ್ಟಿರುತ್ತದೆ:—

(1) ಕೊರಡೆ ಪಜಾಗಳು ವಿಧಿಸುವ ಬಗ್ಗೆ ಅಧಿಕಾರ, ಸೆಕ್ಷನ್ 32.

ತಾರೀಖು 24ನೆ ಅಕ್ಟೋಬರ್ 1903.

ನಂ. 829—ಜು., ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ ಹೊಳೆನರಸೀಪುರದ ಮುನ್ಸೀಫರಾದ ಮೆ|| ಎಂ. ಎಲ್. ಶ್ರೀಕಂಠೇಶಗೌಡರವರು ಎರಡನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 24ನೆ ಅಕ್ಟೋಬರ್ 1903.

ನಂ. 831—ಜ್ಯು. 16—1900–01, ಸ್ ಸ್ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಿಲ್ ಕೋರ್ಟ್‌ಗಳ ರೆಗ್ಯುಲೇಷನಿನ 5ನೆ ಸೆಕ್ಷನ್ ಅನುಸರಿಸಿ ಗೋರೀಬಿದನೂರು ತಾಲ್ಲೂಕು ಮಂಜೇನಹಳ್ಳಿ ಹೋಬಳಿಯನ್ನು ದೊಡ್ಡಬಳ್ಳಾಪುರದ ಮುನಸೀಫ್ಹರ ಸಿವಿಲ್ ಎಕ್ತ್ಯಾರಿಯಿಂದ ಚಿಕ್ಕಬಳ್ಳಾಪುರದ ಮುನಸೀಫರ ಸಿವಿಲ್ ಎಕ್ತ್ಯಾರಿಗೂ ಮತ್ತು ಚಿಂತಾಮಣಿ ತಾಲ್ಲೂಕು ಕೈವಾರ ಹೋಬಳಿಯನ್ನು ಚಿಕ್ಕಬಳ್ಳಾಪುರದ ಮುನಸೀಫರ ಸಿವಿಲ್ ಎಕ್ತ್ಯಾರಿಯಿಂದ ಕೋಲಾರದ ಮುನಸೀಫರ ಸಿವಿಲ್ ಎಕ್ತ್ಯಾರಿಗೂ, 1904ನೆ ಜನವರಿ ಗುರೆ) ತಾರೀಖಿನಾರಭ್ಯ ವರ್ಗ ಮಾಡತಕ್ಕದ್ದೆಂದು ಮೈಸೂರು ಶೀಮೆಯ ಘನವೆಸ್ತ್ರಿದಿದ ಶ್ರೀಮ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

ತಾರೀಖು 26ನೆ ಅಕ್ಟೋಬರ್ 1903.

ನಂ. 1925, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ದಾವಣಗೆರೆ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನ್‌ರಾದ ಮೆ|| ಟಿ. ಎಸ್ ಸಿದ್ದಪ್ಪ, ಎಲ್. ಎಂ. ವ ಎಸ್., ಯವರಿಗೆ 1903ನೆ ಅಕ್ಟೋಬರ್ 24ನೆ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 27ನೆ ಅಕ್ಟೋಬರ್ 1903.

ನಂ. 846—ಜು., ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ ಕೋಲಾರ ಗೋಲ್ಡ್‌ಫೀಲ್ಡ್‌ಗಳ ಮುನ್ಸೀಫರಾದ ಮೆ|| ಟಿ. ಎಸ್. ಎ. ಡಿಕ್ರೂಜ್, ಬಿ. ಎ., ಬಿ. ಎಲ್., ಯವರು ಎರಡನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 27ನೆ ಅಕ್ಟೋಬರ್ 1903.

ನಂ. 1525—ಲೋ. ಫಂ. 26–97, ಮೈಸೂರು ಪಟ್ಟಣದ ನಾನಾ ಮೊಹಲ್ಲಾಗಳಿಗೋಸ್ಕರ ಚುನಾಯಿಸಲ್ಪಟ್ಟ ಮ್ಯುನಿಸಿಪಲ್ ಕಮಿಷನರುಗಳ ಪಟ್ಟಿ:—

ಮೊಹಲ್ಲಾ.		ಕಮಿಷನರವರ ಹೆಸರು.
I. ಖಿಲ್ಲೆ	..	(1) ಮೆ|| ಎಂ. ನರಸಿಂಹಸ್ವಾಮಿಯವರು.
		(2) ,, ಎಲ್. ಸೇತೂರಾಯರು.
II. ನಜರ್‌ಬಾದ್	..	(1) ,, ವಿ. ತಿರುವೆಂಗಡ ಮೊದಲಿಯಾರು).
III. ಲಷ್ಕರ್	..	(1) ,, ಎಂ. ಅನಂತರಾಜಯ್ಯನವರು.
		(2) ,, ಅಬೂಬಕರ್‌ಸೇಟ್ ಯವರು.
IV. ಮಂಡಿ	..	,, ಮಾದಪ್ಪನವರು.
V. ದೇವರಾಜ	..	(1) ,, ಎಂ. ಸಿ. ರಂಗಯ್ಯಂಗಾರು).
		(2) ,, ಬಿ. ವೆಂಕೋಬರಾಯರು.
VI. ಚಾಮರಾಜ	..	,, ಎಂ. ವೆಂಕಟಕೃಷ್ಣಯ್ಯನವರು.
VII. ಕೃಷ್ಣರಾಜ	..	,, ವಿ. ರಾಘವಾಚಾರ್ರು.

ತಾರೀಖು 28ನೆ ಅಕ್ಟೋಬರ್ 1903.

ನಂ. 1467—ಎಜ್ಯು., ಮೈಸೂರ ಮಹಾರಾಣಿಯವರ ಕಾಲೇಜಿನ ಲೇಡಿ ಸೂಪರ್‌ಟಿಂಡೆಂಟರಾದ ಮಿಸ್. ಜಿ. ಎಲ್. ಪಲೆ ಕೋಪ್‌ಯವರಿಗೆ 1903ನೆ ಸೆಪ್ಟಂಬರ್ 15ನೆ ಮುಕ್ತಂ 1508ನೆ ನಂಬರ್ ಇಸ್ತಿಹಾರ್ನ್‌ಮೆಯಲ್ಲಿ ಕೊಟ್ಟಿದ್ದ ತಲಬಿಲ್ಲದ 1 ತಿಂಗಳು 15 ದಿನಗಳ ಎಕ್ಸ್ಟ್ರಾ ಆರ್ಡಿನೆರಿ ರಜಾ ಪೈಕಿ 21 ದಿನಗಳು ಮಾತ್ರ ಉಪಯೋಗಿಸಿಕೊಂಡು 1903ನೆ ಅಕ್ಟೋಬರ್ 4ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತದೆ.

ತಾರೀಖು 15ನೆ ಅಕ್ಟೋಬರ್ 1903.

ನಂ. ರೆ. 1064, ಸ್ರ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಚನ್ನಗಿರಿ ತಾಲ್ಲೂಕಿನ ಹೊಸಹಳ್ಳಿ ಗ್ರಾಮಕ್ಕೆ ಹೊಸಗ್ರಾಮ ನಿವೇಶನವನ್ನು ಏರ್ಪಡಿಸತಕ್ಕ ಬಗ್ಗೆ ಬೇಕಾಗಿರುತ್ತದೆ. ಮತ್ತು ಅದೇ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ;—

ಡಿಸ್ಟ್ರಿಕ್ಟು. ತಾಲ್ಲೂಕು.	ಹೋಬ್ಳಿ.	ಗ್ರಾಮ.	ಹಿಡುವಳೀದಾರನ ಹೆಸರು.	ಸರ್ವೆ ನಂ.	ಜಮ್ಮಾ ವಿಸ್ತೀರ್ಣ.	ಆಕಾರ.	ಚಕ್ಕುಬಂದಿ.			
							ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಶಿವಮೊಗ್ಗ ಚನ್ನಗಿರಿ	ನಲ್ಲೂರು	ಹೊಸಹಳ್ಳಿ	ಪೊಡ್ಡರ್ ದಾಸಾ ಬೋಯಿ	139 ಖುಷ್ಕಿ	ಎಕರೆ. ಗುಂಟೆ. 10 21	ರೂ. ಅ. ಪೈ. 6 8 0	ಸರ್ವೆ ನಂ. 152	ಸರ್ವೆ ನಂ. 137	ಸರ್ವೆ ನಂ. 138	ಸರ್ವೆ ನಂ. 140 ಇ 141

ತಾರೀಖು 23ನೆ ಅಕ್ಟೋಬರ್ 1903.

ನಂ. ರೆ. 1085, ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರುಗಳ ಇದರಡಿ ಕಂಡ ಆಕ್ಟಿಂಗ್ ಮೊಕರರಾತಿಗಳು ಮತ್ತು ಅವರ ನೇಮಣೂಕಿಗಳು ಹಂಗಾಮಿ ಏರ್ಪಾಡಾಗಿ ಹುಕುಂ ಮಾಡಲ್ಪಟ್ಟಿರುತ್ತವೆ:—

1. ನಂಜಿನಗೂಡು ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ಕೆ. ಶ್ರೀಕಂಠಯ್ಯನವರು ಫೈಂಚ್‌ರಾಕ್ಸಿನ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

2. ಚನ್ನಗಿರಿ ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ಕೆ. ಆರ್. ಸುಬ್ಬರಾಯರು ಶಿವಮೊಗ್ಗ ಡಿಸ್ಟ್ರಿಕ್ಟಿನ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾಗಿ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ತಾರೀಖು 24ನೆ ಅಕ್ಟೋಬರ್ 1903.

ನಂ. ರೆ. 1097—ರೆ. ಫೈ. 25—1896-7, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟು ಜಗಲೂರು ತಾಲ್ಲೂಕು ಅಮಲ್ದಾರ್ರಾದ ಮೆ॥ ಬಿ. ಕೃಷ್ಣಸಿಂಗ್ ಯವರಿಗೆ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖಿನಾರಭ್ಯ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಹಾಲಿ ಹಿರಿಯೂರು ತಾಲ್ಲೂಕು ಚಾರ್ಜಿನಲ್ಲಿರುವ ಶಿರಸ್ತೇದಾರ್ರಾದ ಕೆ. ಕೇಶವಾಚಾರ್, ಬಿ. ಎ., ಬಿ. ಎಲ್., ಯವರು ಸದರಿ ಅಮಲ್ದಾರ್ರು ರಜಾದಲ್ಲಿರುವ ಕಾಲದಲ್ಲಿ ಯಾ ಮುತ್ತೊಂದು ಹುಕುಂ ಕೊಡುವ ಪರಿಯಂತ ಜಗಲೂರು ತಾಲ್ಲೂಕು ಅಮಲ್‌ದಾರ್ ವ 3ನೆ ಕ್ಲಾಸ್ ಮೇಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 27ನೆ ಅಕ್ಟೋಬರ್ 1903.

ನಂ. ರೆ. 1111—ರೆ. ಫೈ. 5—1899-1900, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟು ಮಂಡ್ಯ ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ಸಿ. ಕೇಷಗಿರಿರಾಯರಿಗೆ 1903ನೆ ಜುಲೈ 31ನೆ ತಾರೀಖಿನಾರಭ್ಯ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. 1903ನೆ ಜುಲೈ 10ನೆ ಮುಕ್ತಂ ರೆ. 109ನೆ ನಂಬರ್ ಗವರ್ನ್‌ಮೆಂಟಿನ ಆರ್ಡರಿನಲ್ಲಿ ಹುಕುಂ ಮಾಡಲ್ಪಟ್ಟ ಅವರು ಕೆಲಸದಿಂದ ನಿವೃತ್ತರಾಗೋಣವು ಸದರೀ ರಜಾ ಪೂರೈಸಿದ ನಂತರ ಕೂಡ್ಲೆ ಜಾರೀಲಿ ಬರತಕ್ಕದ್ದು.

ತಾರೀಖು 27ನೆ ಅಕ್ಟೋಬರ 1903.

ನಂ. ರೆ. 1116, ಸ್ಪೆಷಿಯಲ್ ಡ್ಯೂಟಿವೇಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ರಾಮಸ್ವಾಮಿಅಯ್ಯಂಗಾರ್ರು ಹಂಗಾಮಿ ಏರ್ಪಾಡಾಗಿ ಬೆಂಗಳೂರ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 27ನೆಅಕ್ಟೋಬರ್ 1903.

ನಂ. ರೆ. 1125, ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 188ನೆ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟು ಕೊಪ್ಪದ ತಾಲ್ಲೂಕಿನ ಅಮಲ್ದಾರ್ರಾದ ಮೆ|| ಬಿ. ಎಂ. ವೆಂಕಟೇಶಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಕೊಪ್ಪದ ತಾಲ್ಲೂಕಿನ ಪೊಲೀಸ್ ಇನ್ಸ್ಪೆಕ್ಟರ್ರಾ[illegible] ಸದರೀ ಅಮಲ್ದಾರ್ರು ರಜಾದಲ್ಲಿರುವ ಕಾಲದಲ್ಲಿ ಯಾ ಮತೊ[illegible]